ಒಎಸ್ 186/2023
ಪಿ.ಡಬ್ಲ್ಯೂ-1

(ಸಾಕ್ಷಿಯನ್ನು ದಿನಾಂಕಃ 18-09-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು)

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದ:**

ಬರಾಬರ್ ನ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ 1 ಎಂದು, ಮಾಹಿತಿ ಹಕ್ಕು ಅಧಿನಿಯಮದ ದಿನಾಂಕ 20-05-2025 ರ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ 2 ಎಂದು, ಪ್ರಕರಣ ಸಂಖ್ಯೆ ಐಎನ್‌ಎಸಿ ಆರ್ 27/2018-19 ರ ಆದೇಶದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ 3 ಎಂದು, ತಹಶೀಲ್ದಾರ್ ಕಚೇರಿಯ ಅಧಿಕೃತ ಜ್ಞಾಪನಾ ಪತ್ರವನ್ನು ಹಾಜರುಪಡಿಸಿದ್ದು, ಪ್ರತಿವಾದಿ ಪರ ವಕೀಲರು ಸದರಿ ದಾಖಲೆಗೆ ಕಾರ್ಯಲಯದ ಮೊಹರು ಇಲ್ಲದಿರುವುದಾಗಿ ತಕರಾರು ವ್ಯಕ್ತಪಡಿಸಿರುತ್ತಾರೆ, ಸದರಿ ದಾಖಲೆಯನ್ನು ಕೂಲಂಕುಶವಾಗಿ ಗಮನಿಸಿದಾಗ ತಹಶೀಲ್ದಾರರ ಸಹಿ ಇರುವುದು ಮೇಲು ನೋಟಕ್ಕೆ ಕಂಡುಬಂದ ಕಾರಣ ತಕರಾರನ್ನು ತಳ್ಳಿಹಾಕಿ ದಾಖಲೆಯನ್ನು ನಿ.ಪಿ 4 ಎಂದು ಗುರುತಿಸಲಾಯಿತು. ನಕಾಶೆಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ 5 ಎಂದು, ಮೂರು ಬಾರ್ ಕೋಡ್ ಹೊಂದಿರುವ ಪಹಣಿಗಳನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ 6 ರಿಂದ ನಿ.ಪಿ 8 ಎಂದು, ಬಾರ್ ಕೋಡ್ ಹೊಂದಿರುವ ಎಂ.ಆರ್ ನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ 9 ಎಂದು, ಬಾರ್ ಕೋಡ್ ಹೊಂದಿರುವ ಮತ್ತೊಂದು ಎಂ.ಆರ್ ನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ 10 ಎಂದು, ಬಾರ್ ಕೋಡ್ ಹೊಂದಿರುವ ಮತ್ತೊಂದು ಎಂ.ಆರ್ ನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ 11 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸ ಇ

1 ನೇ ಅಧಿಕ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ತುಮಕೂರು

ಸಾಕ್ಷಿ ಸಹಿ